



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسۡمِ اللّٰہِ الرَّحۡمٰنِ الرَّحِیۡمِ ○

1. ಹಾಮೀಮ್.

حٰمٓ ۚ﴿۱﴾

2. ಈ ಗ್ರಂಥದ ಅವತೀರ್ಣವು ಪ್ರಬಲನೂ ಯುಕ್ತಿಪೂರ್ಣನೂ ಆದ ಅಲ್ಲಾಹನ ಕಡೆಯಿಂದ ಆಗಿರುತ್ತದೆ.

تَنۡزِیۡلُ الۡکِتٰبِ مِنَ اللّٰہِ الۡعَزِیۡزِ
الۡحَکِیۡمِ ﴿۲﴾

3. ನಿಶ್ಚಯವಾಗಿಯೂ ಸತ್ಯವಿಶ್ವಾಸಿಗಳಿಗೆ ಭೂಮಿ-ಆಕಾಶಗಳಲ್ಲಿ ಅನೇಕ ನಿದರ್ಶನಗಳಿವೆ.

اِنَّ فِی السَّمٰوٰتِ وَ الۡاَرۡضِ لَاٰیٰتٍ
لِّلۡمُؤۡمِنِیۡنَ ؕ﴿۳﴾

4. ನಿಮ್ಮ ಸ್ವಂತ ಸೃಷ್ಟಿಯಲ್ಲಿ ಮತ್ತು (ಭೂಮಿಯ ಮೇಲೆ) ಅಲ್ಲಾಹನು ಹಬ್ಬಿಸುತ್ತಿರುವ ಪ್ರಾಣಿಗಳಲ್ಲಿ, ದೃಢ ನಂಬಿಕೆಯುಳ್ಳವರಿಗೆ ದೊಡ್ಡ ನಿದರ್ಶನಗಳಿವೆ.

وَ فِیۡ خَلۡقِکُمۡ وَ مَا یَبُثُّ مِنۡ دَآبَّۃٍ
اٰیٰتٌ لِّقَوۡمٍ یُّوۡقِنُوۡنَ ۙ﴿۴﴾

5. ರಾತ್ರೆ ಹಗಲುಗಳ ವ್ಯತ್ಯಾಸದಲ್ಲಿ, ಅಲ್ಲಾಹನು ಆಕಾಶದಿಂದ ಜೀವನಾಧಾರವನ್ನಿಳಿಸಿ ಆ ಮೂಲಕ ಸತ್ತ ಭೂಮಿಯನ್ನು ಜೀವಂತಗೊಳಿಸುವುದರಲ್ಲಿ ಮತ್ತು ಮಾರುತಗಳ ಸಂಚಲನದಲ್ಲಿ ಬುದ್ಧಿಶಕ್ತಿಯುಳ್ಳವರಿಗೆ ಅನೇಕ ನಿದರ್ಶನಗಳಿವೆ.

وَ اخۡتِلَافِ الَّیۡلِ وَ النَّہَارِ وَ مَاۤ اَنۡزَلَ اللّٰہُ
مِنَ السَّمَآءِ مِنۡ رِّزۡقٍ فَاَحۡیَا بِہِ
الۡاَرۡضَ بَعۡدَ مَوۡتِہَا وَ تَصۡرِیۡفِ الرِّیٰحِ
اٰیٰتٌ لِّقَوۡمٍ یَّعۡقِلُوۡنَ ﴿۵﴾

6. ಇವು ಅಲ್ಲಾಹನ ನಿದರ್ಶನಗಳಾಗಿದ್ದು ಇವುಗಳನ್ನು ನಾವು ನಿಮ್ಮ ಮುಂದೆ ಸುವ್ಯಕ್ತವಾಗಿ ವಿವರಿಸುತ್ತಿದ್ದೇವೆ. ಹೀಗಿರುತ್ತಾ ಅಲ್ಲಾಹನ ಹಾಗೂ ಅವನ ವಚನಗಳ ಬಳಿಕ ಇನ್ನಾವ ವಿಷಯದ ಮೇಲೆ ಜನರು ವಿಶ್ವಾಸವಿರಿಸುವರು.

تِلۡکَ اٰیٰتُ اللّٰہِ نَتۡلُوۡہَا عَلَیۡکَ بِالۡحَقِّ ۚ
فَبِاَیِّ حَدِیۡثٍۭ بَعۡدَ اللّٰہِ وَ اٰیٰتِہٖ یُؤۡمِنُوۡنَ ﴿۶﴾

7. ಪ್ರತಿಯೊಬ್ಬ ಸುಳ್ಳಾರೋಪಿ ದುಷ್ಟನಿಗೆ ವಿನಾಶವಿದೆ-

وَیۡلٌ لِّکُلِّ اَفَّاکٍ اَثِیۡمٍ ۙ﴿۷﴾

8. ಅವನ ಮುಂದೆ ಅಲ್ಲಾಹನ ಸೂಕ್ತಗಳನ್ನು ಓದಿ ಹೇಳಲಾಗುತ್ತದೆ.

یَّسۡمَعُ اٰیٰتِ اللّٰہِ تُتۡلٰی عَلَیۡہِ ثُمَّ یُصِرُّ

ಅವನು ಅದನ್ನು ಆಲಿಸುತ್ತಾನೆ. ಅನಂತರ ಅಹಂಕಾರದಿಂದ ಅವನು ಕೇಳಲೇ ಇಲ್ಲವೋ ಎಂಬಂತೆ ತನ್ನ ನಿಷೇಧ ನೀತಿಯಲ್ಲಿ ಸ್ಥಿರವಾಗಿರುತ್ತಾನೆ. ಇಂತಹವನಿಗೆ ವೇದನಾಯುಕ್ತ ಯಾತನೆಯ ಸುವಾರ್ತೆ ಕೊಟ್ಟುಬಿಡಿರಿ.

مُسْتَكْبِرًا كَاَنْ لَّمْ يَسْمَعْهَا ۚ فَبَشِّرْهُ
بِعَذَابٍ اَلِيْمٍ ٨

9. ನಮ್ಮ ಸೂಕ್ತಗಳ ಪೈಕಿ ಏನಾದರೊಂದು ವಿಷಯ ಅವನಿಗೆ ತಿಳಿದಾಗ ಅವನು ಅವುಗಳನ್ನು ಗೇಲಿ ಮಾಡಲಾರಂಭಿಸುತ್ತಾನೆ. ಇಂತಹ ಎಲ್ಲರಿಗೆ ಅಪಮಾನಕಾರಿ ಯಾತನೆಯಿದೆ.

وَاِذَا عَلِمَ مِنْ اٰيٰتِنَا شَيْـًٔا اتَّخَذَهَا
هُزُوًا ۗ اُولٰٓئِكَ لَهُمْ عَذَابٌ مُّهِيْنٌ ٩

10. ಅವರ ಮುಂದೆ ನರಕವಿದೆ. ಅವರ ಇಹಲೋಕದ ಯಾವ ಸಂಪಾದನೆಯೂ ಅವರ ಪಾಲಿಗೆ ಕಿಂಚಿತ್ತೂ ಉಪಯುಕ್ತವಾಗ ಲಾರದು ಮತ್ತು ಅವರು ಅಲ್ಲಾಹನನ್ನು ಬಿಟ್ಟು ತಮ್ಮ ರಕ್ಷಕ ಮಿತ್ರರಾಗಿ ಮಾಡಿಕೊಂಡಿರುವವರೂ ಅವರಿಗಾಗಿ ಏನನ್ನೂ ಮಾಡಲಾರರು. ಅವರಿಗೆ ಘೋರ ಯಾತನೆ ಇದೆ.

مِنْ وَّرَآئِهِمْ جَهَنَّمُ ۚ وَلَا يُغْنِيْ عَنْهُمْ
مَّا كَسَبُوْا شَيْـًٔا وَّلَا مَا اتَّخَذُوْا مِنْ
دُوْنِ اللّٰهِ اَوْلِيَآءَ ۚ وَلَهُمْ عَذَابٌ عَظِيْمٌ ١٠

11. ಈ ಕುರ್‌ಆನ್ ಸಾದ್ಯಂತ ಮಾರ್ಗದರ್ಶನವಾಗಿದೆ- ಮತ್ತು ತಮ್ಮ ಪ್ರಭುವಿನ ಸೂಕ್ತಗಳನ್ನು ನಿರಾಕರಿಸುವವರಿಗೆ ತೀವ್ರ ವೇದನಾಯುಕ್ತವಾದ ಯಾತನೆ ಇದೆ.

هٰذَا هُدًى ۚ وَالَّذِيْنَ كَفَرُوْا بِاٰيٰتِ رَبِّهِمْ
لَهُمْ عَذَابٌ مِّنْ رِّجْزٍ اَلِيْمٌ ١١

12. ಅಲ್ಲಾಹನೇ ನಿಮಗಾಗಿ ಸಮುದ್ರವನ್ನು ನಿಯಂತ್ರಿಸಿ, ಅವನ ಅಪ್ಪಣೆಯಿಂದ ಅದರಲ್ಲಿ ನಾವೆಗಳು ಚಲಿಸುವಂತೆಯೂ ನೀವು ಅವನ ಅನುಗ್ರಹವನ್ನರಸುವಂತೆಯೂ ಕೃತಜ್ಞರಾಗುವಂತೆಯೂ ಮಾಡಿರುವನು.

اَللّٰهُ الَّذِيْ سَخَّرَ لَكُمُ الْبَحْرَ لِتَجْرِيَ
الْفُلْكُ فِيْهِ بِاَمْرِهٖ وَلِتَبْتَغُوْا مِنْ
فَضْلِهٖ وَلَعَلَّكُمْ تَشْكُرُوْنَ ١٢

13. ಅವನು ಭೂಮಿ ಮತ್ತು ಆಕಾಶಗಳ ಸಕಲ ವಸ್ತುಗಳನ್ನು ನಿಮಗಾಗಿ ನಿಯಂತ್ರಿಸಿ ಕೊಟ್ಟನು. ಇವೆಲ್ಲವನ್ನೂ ತನ್ನ ಕಡೆ ಯಿಂದಲೇ[1] ಮಾಡಿದನು. ಆಲೋಚಿಸುವ ಜನರಿಗೆ ಇದರಲ್ಲಿ ಧಾರಾಳ ನಿದರ್ಶನಗಳಿವೆ.

وَسَخَّرَ لَكُمْ مَّا فِي السَّمٰوٰتِ وَمَا فِي
الْاَرْضِ جَمِيْعًا مِّنْهُ ۗ اِنَّ فِيْ ذٰلِكَ
لَاٰيٰتٍ لِّقَوْمٍ يَّتَفَكَّرُوْنَ ١٣

14. ಸಂದೇಶವಾಹಕರೇ, ಅಲ್ಲಾಹನ ಕಡೆಯಿಂದ ದುರ್ದಿನಗಳು ಬರಬಹುದೆಂಬ ಭಯವೇ ಇಲ್ಲದ ಜನರ ದುರ್ವರ್ತನೆಗಳ ಬಗ್ಗೆ

قُلْ لِّلَّذِيْنَ اٰمَنُوْا يَغْفِرُوْا لِلَّذِيْنَ
لَا يَرْجُوْنَ اَيَّامَ اللّٰهِ لِيَجْزِيَ قَوْمًا بِمَا

1. ಇದಕ್ಕೆ ಎರಡು ಅರ್ಥಗಳಿವೆ: ಮೊದಲನೆಯದಾಗಿ ಅಲ್ಲಾಹನ ಈ ಕೊಡುಗೆ ಲೋಕದ ರಾಜರುಗಳಂತಹ ಕೊಡುಗೆಯಲ್ಲ. ಅವರು ಪ್ರಜೆಗಳಂತೆ ಗಳಿಸಿದ ಸಂಪತ್ತನ್ನು ಪ್ರಜೆಗಳ ಪೈಕಿಯೇ ಕೆಲವರಿಗೆ ನೀಡುತ್ತಾರೆ. ಅದಕ್ಕೆ ಪ್ರತಿಯಾಗಿ ನಿಸರ್ಗದ ಸಂಪತ್ತೆಲ್ಲವನ್ನೂ ಅಲ್ಲಾಹನೇ ಸೃಷ್ಟಿಸಿದ್ದಾನೆ ಮತ್ತು ಅವನು ತನ್ನ ವತಿಯಿಂದ ಅದನ್ನು ಮಾನವರಿಗೆ ಪ್ರದಾನ ಮಾಡಿದ್ದಾನೆ. ಎರಡನೆಯದಾಗಿ ಈ ಸಂಪತ್ತನ್ನು ಸೃಷ್ಟಿಸುವಲ್ಲಿ ಅಲ್ಲಾಹನಿಗೆ ಯಾರೂ ಸಹಭಾಗಿಗಳಿಲ್ಲ. ಹಾಗೆಯೇ ಅದನ್ನು ಮನುಷ್ಯರ ಅಧೀನಕ್ಕೆ ಕೊಡುವಲ್ಲಿಯೂ ಇತರ ಯಾರ ಪಾತ್ರವೂ ಇಲ್ಲ. ಅಲ್ಲಾಹನು ಮಾತ್ರ ಅದರ ಸೃಷ್ಟಿಕರ್ತ. ಅವನೇ ಅದನ್ನು ಮಾನವರಿಗೆ ಪ್ರದಾನ ಮಾಡಿದ್ದಾನೆ.

ಕ್ಷಮಾಶೀಲರಾಗಿರಬೇಕೆಂದು ಸತ್ಯವಿಶ್ವಾಸಿಗಳೊಡನೆ ಹೇಳಿರಿ. (ಏಕೆಂದರೆ) ಒಂದು ಪಂಗಡಕ್ಕೆ ಅದರ ದುಡಿಮೆಯ ಫಲವನ್ನು ಸ್ವತಃ ಅಲ್ಲಾಹನೇ ನೀಡುವಂತಾಗಲಿ.

كَانُوا يَكْسِبُونَ ١٤

15. ಯಾರಾದರೂ ಸತ್ಕರ್ಮ ಮಾಡಿದರೆ ಅದರ ಫಲ ಅವನಿಗೇ ಸಿಗುವುದು ಮತ್ತು ದುಷ್ಕರ್ಮವೆಸಗುವವನು ಅದರ ಪರಿಣಾಮವನ್ನು ತಾನೇ ಅನುಭವಿಸುವನು. ಎಲ್ಲರಿಗೂ ತಮ್ಮ ಪ್ರಭುವಿನ ಕಡೆಗೇ ಮರಳಬೇಕಾಗಿದೆ.

مَنْ عَمِلَ صَالِحًا فَلِنَفْسِهِ ۖ وَمَنْ
أَسَاءَ فَعَلَيْهَا ۖ ثُمَّ إِلَىٰ رَبِّكُمْ تُرْجَعُونَ ١٥

16. ಇದಕ್ಕೆ ಮುಂಚೆ ನಾವು ಬನೀಇಸ್ರಾಈಲರಿಗೆ ಗ್ರಂಥ, 'ನಿರ್ಧಾರ ಶಕ್ತಿ' ಮತ್ತು ಪ್ರವಾದಿತ್ವ ಪ್ರದಾನ ಮಾಡಿದ್ದೆವು. ನಾವು ಅವರಿಗೆ ಅತ್ಯುತ್ತಮ ಜೀವನ ಸಾಧನಗಳನ್ನು ಕರುಣಿಸಿದೆವು. ಅಖಿಲ ಜಗತ್ತಿನವರ ಮೇಲೆ ಅವರಿಗೆ ಶ್ರೇಷ್ಠತೆ ದಯಪಾಲಿಸಿದೆವು.

وَلَقَدْ آتَيْنَا بَنِي إِسْرَائِيلَ الْكِتَابَ
وَالْحُكْمَ وَالنُّبُوَّةَ وَرَزَقْنَاهُمْ مِنَ
الطَّيِّبَاتِ وَفَضَّلْنَاهُمْ عَلَى الْعَالَمِينَ ١٦

17. ಧರ್ಮದ ವಿಷಯದಲ್ಲಿ ಅವರಿಗೆ ಸುವ್ಯಕ್ತ ನಿರ್ದೇಶನಗಳನ್ನು ಕೊಟ್ಟೆವು. ಅನಂತರ ಅವರೊಳಗೆ ಭಿನ್ನಾಭಿಪ್ರಾಯಗಳು ತಲೆ ದೋರಿದುದು (ತಿಳುವಳಿಕೆಯಿಲ್ಲದ ಕಾರಣದಿಂದ ಆಗಿರಲಿಲ್ಲ) ಜ್ಞಾನ ಬಂದ ಬಳಿಕವಾಗಿತ್ತು ಮತ್ತು ಅವರು ಪರಸ್ಪರ ಅತಿರೇಕ ವೆಸಗಲು ಇಚ್ಛಿಸಿದುದರಿಂದಾಗಿತ್ತು. ಖಂಡಿತವಾಗಿಯೂ ನಿನ್ನ ಪ್ರಭು ಅವರು ಭಿನ್ನಾಭಿಪ್ರಾಯ ತಾಳುತ್ತಾ ಬಂದಿರುವ ವಿಷಯಗಳ ತೀರ್ಮಾನವನ್ನು ಪುನರುತ್ಥಾನದ ದಿನ ಮಾಡುವನು.

وَآتَيْنَاهُمْ بَيِّنَاتٍ مِنَ الْأَمْرِ ۖ فَمَا
اخْتَلَفُوا إِلَّا مِنْ بَعْدِ مَا جَاءَهُمُ
الْعِلْمُ بَغْيًا بَيْنَهُمْ ۚ إِنَّ رَبَّكَ يَقْضِي
بَيْنَهُمْ يَوْمَ الْقِيَامَةِ فِيمَا كَانُوا فِيهِ يَخْتَلِفُونَ ١٧

18. ಇನ್ನು ಪೈಗಂಬರರೇ, ನಾವು ನಿಮ್ಮನ್ನು ಧರ್ಮದ ವಿಷಯದಲ್ಲಿ ಒಂದು ಸುಸ್ಪಷ್ಟ ರಾಜಮಾರ್ಗ(ಧರ್ಮಶಾಸ್ತ್ರ)ದಲ್ಲಿ ಸ್ಥಿರ ವಾಗಿರಿಸಿದ್ದೇವೆ. ಆದುದರಿಂದ ನೀವು ಅದರಲ್ಲೇ ನಡೆಯಿರಿ. ಮತ್ತು ಅಜ್ಞಾನಿಗಳ ಅಭಿಲಾಷೆಗಳನ್ನು ಅನುಸರಿಸಬೇಡಿರಿ.

ثُمَّ جَعَلْنَاكَ عَلَىٰ شَرِيعَةٍ مِنَ الْأَمْرِ
فَاتَّبِعْهَا وَلَا تَتَّبِعْ أَهْوَاءَ الَّذِينَ
لَا يَعْلَمُونَ ١٨

19. ಅಲ್ಲಾಹನಿಗೆದುರಾಗಿ ಅವರು ನಿಮಗೆ ಯಾವ ಸಹಾಯವನ್ನೂ ಮಾಡಲಾರರು.[2] ಅಕ್ರಮಿಗಳು ಪರಸ್ಪರ ಮಿತ್ರರು ಮತ್ತು ಧರ್ಮನಿಷ್ಠರ ಮಿತ್ರನು ಅಲ್ಲಾಹನಾಗಿದ್ದಾನೆ.

إِنَّهُمْ لَنْ يُغْنُوا عَنْكَ مِنَ اللَّهِ شَيْئًا ۚ
وَإِنَّ الظَّالِمِينَ بَعْضُهُمْ أَوْلِيَاءُ بَعْضٍ ۖ
وَاللَّهُ وَلِيُّ الْمُتَّقِينَ ١٩

20. ಇವು ಸಕಲ ಮಾನವರಿಗಾಗಿರುವ ದಿವ್ಯಜ್ಞಾನದ ಪ್ರಕಾಶಗಳು ಮತ್ತು ಇದು ದೃಢವಿಶ್ವಾಸವುಳ್ಳವರಿಗೆ ಸನ್ಮಾರ್ಗ ದರ್ಶನವೂ ಕೃಪೆಯೂ ಆಗಿದೆ.

هَٰذَا بَصَائِرُ لِلنَّاسِ وَهُدًى وَرَحْمَةٌ
لِقَوْمٍ يُوقِنُونَ ٢٠

2. ಅರ್ಥಾತ್- ಅವರ ಸಂಪ್ರೀತಿ ಗಳಿಸಲಿಕ್ಕಾಗಿ ಅಲ್ಲಾಹನ ಧರ್ಮದಲ್ಲಿ ಯಾವುದೇ ರೀತಿಯ ಏರುಪೇರು ಮಾಡಿದರೆ ಅಲ್ಲಾಹನ ವಿಚಾರಣೆಯಿಂದ ಅವರು ನಿಮ್ಮನ್ನು ರಕ್ಷಿಸಲಾರರು.

21. ದುಷ್ಕರ್ಮಗಳೆಸಗಿದವರು, ನಾವು ಅವರನ್ನು ಸತ್ಯವಿಶ್ವಾಸವನ್ನಿರಿಸಿ ಸತ್ಕರ್ಮವೆಸಗಿದವರಿಗೆ ಸಮಾನರಾಗಿ ಮಾಡುವೆವೆಂದೂ ಅವರಿಬ್ಬರ ಜೀವನ ಮರಣಗಳು ಸಮಾನ ಸ್ವರೂಪದ್ದಾಗಿರುವು ದೆಂದೂ ಭಾವಿಸಿಕೊಂಡಿರುವರೇ? ಇವರು ಮಾಡುವ ತೀರ್ಮಾನ ಬಹಳ ಕೆಟ್ಟದು.

أَمْ حَسِبَ الَّذِينَ اجْتَرَحُوا السَّيِّئَاتِ
أَنْ نَجْعَلَهُمْ كَالَّذِينَ آمَنُوا وَعَمِلُوا
الصَّالِحَاتِ سَوَاءً مَحْيَاهُمْ وَمَمَاتُهُمْ ۚ
سَاءَ مَا يَحْكُمُونَ ﴿٢١﴾ ع ٢ ١٠ ١٨

22. ಅಲ್ಲಾಹನು ಭೂಮಿ-ಆಕಾಶಗಳನ್ನು ಸತ್ಯಪೂರ್ಣವಾಗಿ ಸೃಷ್ಟಿಸಿರು ತ್ತಾನೆ. ಪ್ರತಿಯೊಬ್ಬ ಜೀವಿಗೆ ಅದರ ದುಡಿಮೆಯ ಪ್ರತಿಫಲ ನೀಡಲಿಕ್ಕಾಗಿ, ಖಂಡಿತವಾಗಿಯೂ ಜನರ ಮೇಲೆ ಅಕ್ರಮ ವೆಸಗಲಾಗದು.

وَخَلَقَ اللَّهُ السَّمَاوَاتِ وَالْأَرْضَ بِالْحَقِّ
وَلِتُجْزَىٰ كُلُّ نَفْسٍ بِمَا كَسَبَتْ وَهُمْ
لَا يُظْلَمُونَ ﴿٢٢﴾

23. ತನ್ನ ಸ್ವೇಚ್ಛೆಗಳನ್ನೇ ತನ್ನ ದೇವರಾಗಿ ಮಾಡಿಕೊಂಡವನ ಕುರಿತು ನೀವೇಂದಾದರೂ ವಿವೇಚಿಸಿದಿರಾ? ಅಲ್ಲಾಹನು ಜ್ಞಾನದ ಹೊರತಾಗಿಯೂ[3] ಅವನನ್ನು ಪಥಭ್ರಷ್ಟತೆಗೆ ಎಸೆದು ಬಿಟ್ಟನು. ಅವನ ಹೃದಯ ಹಾಗೂ ಕಿವಿಗಳಿಗೆ ಮುದ್ರೆಯನ್ನು ಒತ್ತಿ ಬಿಟ್ಟನು ಮತ್ತು ಅವನ ದೃಷ್ಟಿಗಳ ಮೇಲೆ ತೆರೆಯೆಳೆದು ಬಿಟ್ಟನು. ಅಲ್ಲಾಹನ ಬಳಿಕ ಅವನಿಗೆ ಸನ್ಮಾರ್ಗ ನೀಡಲು ಇನ್ನಾರಿದ್ದಾರೆ? ನೀವು ಪಾಠ ಕಲಿಯುವುದಿಲ್ಲವೇ?

أَفَرَأَيْتَ مَنِ اتَّخَذَ إِلَٰهَهُ هَوَاهُ وَ
أَضَلَّهُ اللَّهُ عَلَىٰ عِلْمٍ وَخَتَمَ عَلَىٰ سَمْعِهِ
وَقَلْبِهِ وَجَعَلَ عَلَىٰ بَصَرِهِ غِشَاوَةً
فَمَنْ يَهْدِيهِ مِنْ بَعْدِ اللَّهِ ۚ
أَفَلَا تَذَكَّرُونَ ﴿٢٣﴾

24. ಜೀವನವೆಂದರೆ ನಮ್ಮ ಈ ಲೋಕದ ಜೀವನ ಮಾತ್ರ. ನಮ್ಮ ಸಾವು ಮತ್ತು ಬದುಕು ಇಲ್ಲೇ. ಕಾಲಚಕ್ರದ ಹೊರತು ಇನ್ನಾ ವುದೂ ನಮ್ಮನ್ನು ನಾಶಗೊಳಿಸುವುದಿಲ್ಲವೆಂದು ಇವರು ಹೇಳು ತ್ತಾರೆ. ವಾಸ್ತವದಲ್ಲಿ ಇವರ ಬಳಿ ಈ ಕುರಿತು ಯಾವ ಜ್ಞಾನವೂ ಇಲ್ಲ. ಇವರು ಕೇವಲ ಊಹೆಯ ಆಧಾರದಲ್ಲಿ ಹೀಗೆ ಹೇಳುತ್ತಿದ್ದಾರೆ.

وَقَالُوا مَا هِيَ إِلَّا حَيَاتُنَا الدُّنْيَا نَمُوتُ
وَنَحْيَا وَمَا يُهْلِكُنَا إِلَّا الدَّهْرُ ۚ وَمَا
لَهُمْ بِذَٰلِكَ مِنْ عِلْمٍ ۖ إِنْ هُمْ
إِلَّا يَظُنُّونَ ﴿٢٤﴾

25. ನಮ್ಮ ಸುವ್ಯಕ್ತ ಸೂಕ್ತಗಳನ್ನು ಇವರಿಗೆ ಕೇಳಿಸಲಾದಾಗ, ಇವರ ಬಳಿ- "ನೀವು ಸತ್ಯವಂತರಾಗಿದ್ದರೆ ನಮ್ಮ ಪೂರ್ವಜರನ್ನು ಎಬ್ಬಿಸಿ ತನ್ನಿರಿ" ಎಂದು ಹೇಳುವುದರ ಹೊರತು ಬೇರಾವ ವಾದವೂ ಇರುವುದಿಲ್ಲ.

وَإِذَا تُتْلَىٰ عَلَيْهِمْ آيَاتُنَا بَيِّنَاتٍ مَا
كَانَ حُجَّتَهُمْ إِلَّا أَنْ قَالُوا ائْتُوا
بِآبَائِنَا إِنْ كُنْتُمْ صَادِقِينَ ﴿٢٥﴾

3. ಮೂಲದಲ್ಲಿ 'ಅದಲ್ಲಹುಲ್ಲಾಹು ಅಲಾ ಇಲ್‌ಮಿನ್' ಪದ ಪ್ರಯೋಗವಾಗಿದೆ. ಅವನು ಜ್ಞಾನಿಯಾಗಿದ್ದುದರ ಹೊರತಾಗಿಯೂ ಅಲ್ಲಾಹನ ವತಿಯಿಂದ ಪಥಭ್ರಷ್ಟತೆಗೆ ಎಸೆಯಲ್ಪಟ್ಟನು. ಏಕೆಂದರೆ ಅವನು ತನ್ನ ಸ್ವೇಚ್ಛೆಯ ದಾಸನಾಗಿದ್ದನು ಎಂಬುದು ಇದರ ಒಂದು ಅರ್ಥ. ಅವನು ತನ್ನ ಸ್ವೇಚ್ಛೆಯನ್ನೇ ದೇವನನ್ನಾಗಿ ಮಾಡಿಕೊಂಡಿರುವನೆಂದು ತಿಳಿದು ಅಲ್ಲಾಹನು ಅವನನ್ನು ಪಥಭ್ರಷ್ಟತೆಗೆ ಈಡು ಮಾಡಿ ಬಿಟ್ಟನು' ಎಂಬುದು ಅದರ ಇನ್ನೊಂದು ಅರ್ಥ.

26. ಸಂದೇಶವಾಹಕರೇ, ಇವರೊಡನೆ ಹೇಳಿರಿ- "ಅಲ್ಲಾಹನೇ ನಿಮಗೆ ಜೀವನ ಪ್ರದಾನ ಮಾಡುತ್ತಾನೆ. ಅನಂತರ ಅವನೇ ನಿಮಗೆ ಮರಣ ಕೊಡುತ್ತಾನೆ. ಆ ಬಳಿಕ ಪುನರುತ್ಥಾನದ ದಿನ ಅವನೇ ನಿಮ್ಮನ್ನು ಒಟ್ಟುಗೂಡಿಸುವನು. ಅದು ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಹೆಚ್ಚಿನವರು ತಿಳಿಯುವುದಿಲ್ಲ.

قُلِ اللّٰهُ يُحْيِيْكُمْ ثُمَّ يُمِيْتُكُمْ ثُمَّ يَجْمَعُكُمْ اِلٰى يَوْمِ الْقِيٰمَةِ لَا رَيْبَ فِيْهِ وَلٰكِنَّ اَكْثَرَ النَّاسِ لَا يَعْلَمُوْنَ ٢٦

27. ಭೂಮಿ-ಆಕಾಶಗಳ ಪ್ರಭುತ್ವ ಅಲ್ಲಾಹನದ್ದೇ ಆಗಿದೆ. ಪುನರುತ್ಥಾನದ ಘಳಿಗೆ ಬರುವ ದಿನದಂದು ಮಿಥ್ಯಾರಾಧಕರು ನಷ್ಟಕ್ಕೊಳಗಾಗುವರು."

وَلِلّٰهِ مُلْكُ السَّمٰوٰتِ وَالْاَرْضِ ۗ وَيَوْمَ تَقُوْمُ السَّاعَةُ يَوْمَئِذٍ يَّخْسَرُ الْمُبْطِلُوْنَ ٢٧

28. ಆಗ ನೀವು ಪ್ರತಿಯೊಂದು ಸಮುದಾಯವೂ ಮೊಣಕಾಲೂರಿ ಬಿದ್ದುಕೊಂಡಿರುವುದನ್ನು ಕಾಣುವಿರಿ. ಪ್ರತಿಯೊಂದು ಕೂಟವನ್ನು ತನ್ನ ಕರ್ಮಪತ್ರವನ್ನು ನೋಡಲಿಕ್ಕಾಗಿ ಕರೆಯಲಾಗುವುದು. ಅವರೊಡನೆ (ಹೀಗೆ) ಹೇಳಲಾಗುವುದು, "ಇಂದು ನಿಮಗೆ ನೀವು ಮಾಡುತ್ತಿದ್ದ ಕರ್ಮಗಳ ಪ್ರತಿಫಲವನ್ನು ನೀಡಲಾಗುವುದು.

وَتَرٰى كُلَّ اُمَّةٍ جَاثِيَةً ۫ كُلُّ اُمَّةٍ تُدْعٰٓى اِلٰى كِتٰبِهَا ۗ اَلْيَوْمَ تُجْزَوْنَ مَا كُنْتُمْ تَعْمَلُوْنَ ٢٨

29. ಇದು ನಾವು ಸಿದ್ಧಪಡಿಸಿದ್ದ ಕರ್ಮಪತ್ರವಾಗಿದ್ದು ಇದು ನಿಮ್ಮ ಬಗ್ಗೆ ಸರಿಯಾದ ಸಾಕ್ಷಿ ನೀಡುತ್ತದೆ. ನೀವು ಮಾಡುತ್ತಿದ್ದ ಎಲ್ಲವನ್ನೂ ನಾವು ಬರೆಸುತ್ತಲೇ ಇದ್ದೆವು."

هٰذَا كِتٰبُنَا يَنْطِقُ عَلَيْكُمْ بِالْحَقِّ ۗ اِنَّا كُنَّا نَسْتَنْسِخُ مَا كُنْتُمْ تَعْمَلُوْنَ ٢٩

30. ಅನಂತರ ಸತ್ಯವಿಶ್ವಾಸವಿರಿಸಿ ಸತ್ಕರ್ಮ ಮಾಡುತ್ತಿದ್ದವರನ್ನು ಅವರ ಪ್ರಭು ತನ್ನ ಕೃಪೆಯೊಳಗೆ ಪ್ರವೇಶಗೊಳಿಸುವನು. ಇದುವೇ ಸುವ್ಯಕ್ತ ವಿಜಯ.

فَاَمَّا الَّذِيْنَ اٰمَنُوْا وَعَمِلُوا الصّٰلِحٰتِ فَيُدْخِلُهُمْ رَبُّهُمْ فِيْ رَحْمَتِهٖ ۗ ذٰلِكَ هُوَ الْفَوْزُ الْمُبِيْنُ ٣٠

31. ಸತ್ಯನಿಷೇಧಿಗಳೊಡನೆ (ಹೀಗೆ ಹೇಳಲಾಗುವುದು), "ನನ್ನ ಸೂಕ್ತಗಳನ್ನು ನಿಮಗೆ ಓದಿ ಹೇಳಲಾಗುತ್ತಿರಲಿಲ್ಲವೇ? ಆದರೆ, ನೀವು ಅಹಂಕಾರಪಟ್ಟಿರಿ ಮತ್ತು ಅಪರಾಧಿಗಳಾಗಿ ಬಾಳಿದಿರಿ.

وَاَمَّا الَّذِيْنَ كَفَرُوْا ۗ اَفَلَمْ تَكُنْ اٰيٰتِيْ تُتْلٰى عَلَيْكُمْ فَاسْتَكْبَرْتُمْ وَكُنْتُمْ قَوْمًا مُّجْرِمِيْنَ ٣١

32. ಅಲ್ಲಾಹನ ವಾಗ್ದಾನ ಸತ್ಯಪೂರ್ಣವಾಗಿದೆ ಮತ್ತು ಪುನರುತ್ಥಾನ ದಿನವು ಬರುವುದರಲ್ಲಿ ಯಾವ ಸಂದೇಹವೂ ಇಲ್ಲ, ಎಂದು ಹೇಳಲಾದಾಗ ನೀವು, ಪುನರುತ್ಥಾನವೆಂದರೇನೆಂದು ನಮಗೆ ತಿಳಿಯದು. ನಮಗೊಂದು ಊಹೆ ಮಾತ್ರ ಇದೆ, ನಮಗೆ ನಂಬಿಕೆ ಇಲ್ಲ ಎಂದು ಹೇಳುತ್ತಿದ್ದಿರಿ."

وَاِذَا قِيْلَ اِنَّ وَعْدَ اللّٰهِ حَقٌّ وَّالسَّاعَةُ لَا رَيْبَ فِيْهَا قُلْتُمْ مَّا نَدْرِيْ مَا السَّاعَةُ ۙ اِنْ نَّظُنُّ اِلَّا ظَنًّا وَّمَا نَحْنُ بِمُسْتَيْقِنِيْنَ ٣٢

33. ಆಗ ಅವರ ಮುಂದೆ ಅವರ ಕರ್ಮಗಳ ದೋಷಗಳು ವ್ಯಕ್ತವಾಗುವುವು ಮತ್ತು ಅವರು ಯಾವುದನ್ನು ಗೇಲಿ ಮಾಡುತ್ತಿದ್ದರೋ ಅದರ ಸುಳಿಯಲ್ಲೇ ಸಿಲುಕಿಕೊಳ್ಳುವರು.

وَبَدَا لَهُمْ سَيِّاٰتُ مَا عَمِلُوْا وَحَاقَ بِهِمْ مَّا كَانُوْا بِهٖ يَسْتَهْزِءُوْنَ ﴿٣٣﴾

34. ಮತ್ತು ಅವರೊಡನೆ (ಹೀಗೆ) ಹೇಳಲಾಗುವುದು, "ನೀವು ಈ ದಿನದ ಭೇಟಿಯನ್ನು ಮರೆತು ಬಿಟ್ಟಿದ್ದಂತೆಯೇ ಇಂದು ನಾವು ನಿಮ್ಮನ್ನು ಮರೆತು ಬಿಡುತ್ತೇವೆ. ಇನ್ನು ನರಕಾಗ್ನಿಯೇ ನಿಮ್ಮ ನೆಲೆಯಾಗಿದೆ ಮತ್ತು ನಿಮಗಾರೂ ಸಹಾಯಕರಿಲ್ಲ.

وَقِيْلَ الْيَوْمَ نَنْسٰىكُمْ كَمَا نَسِيْتُمْ لِقَآءَ يَوْمِكُمْ هٰذَا وَمَاْوٰىكُمُ النَّارُ وَمَا لَكُمْ مِّنْ نّٰصِرِيْنَ ﴿٣٤﴾

35. ನೀವು ಅಲ್ಲಾಹನ ಸೂಕ್ತಗಳನ್ನು ಅಪಹಾಸ್ಯ ಮಾಡಿದ್ದುದರಿಂದಲೂ ನಿಮ್ಮನ್ನು ಭೂಲೋಕದ ಜೀವನವು ವಂಚಿಸಿ ಬಿಟ್ಟಿದ್ದರಿಂದಲೂ ನಿಮ್ಮ ಗತಿ ಹೀಗಾಯಿತು. ಆದುದರಿಂದ ಇಂದು ಇವರು ನರಕದಿಂದ ಬಿಡುಗಡೆ ಪಡೆಯಲಾರರು ಮತ್ತು ಕ್ಷಮೆ ಬೇಡಿ ನಿಮ್ಮ ಪ್ರಭುವನ್ನು ಮೆಚ್ಚಿಸಿಕೊಳ್ಳಿ ಎಂದೂ ಇವರೊಡನೆ ಹೇಳಲಾಗದು."4

ذٰلِكُمْ بِاَنَّكُمُ اتَّخَذْتُمْ اٰيٰتِ اللّٰهِ هُزُوًا وَّغَرَّتْكُمُ الْحَيٰوةُ الدُّنْيَا ۚ فَالْيَوْمَ لَا يُخْرَجُوْنَ مِنْهَا وَلَا هُمْ يُسْتَعْتَبُوْنَ ﴿٣٥﴾

36. ಆದುದರಿಂದ ಸರ್ವ ಪ್ರಶಂಸೆಯೂ ಭೂಮಿ-ಆಕಾಶಗಳ ಒಡೆಯನಾಗಿರುವ ಮತ್ತು ಸಕಲ ಲೋಕವಾಸಿಗಳ ಪಾಲಕಪ್ರಭುವಾಗಿರುವ ಅಲ್ಲಾಹನಿಗೇ ಮೀಸಲು.

فَلِلّٰهِ الْحَمْدُ رَبِّ السَّمٰوٰتِ وَرَبِّ الْاَرْضِ رَبِّ الْعٰلَمِيْنَ ﴿٣٦﴾

37. ಭೂಮಿ-ಆಕಾಶಗಳಲ್ಲಿ ಮಹಾನತೆಯು ಅವನಿಗೇ ಇದೆ ಮತ್ತು ಅವನೇ ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

وَلَهُ الْكِبْرِيَآءُ فِى السَّمٰوٰتِ وَالْاَرْضِ ۪ وَهُوَ الْعَزِيْزُ الْحَكِيْمُ ﴿٣٧﴾ ع

---

4. ಒಬ್ಬ ಯಜಮಾನ ತನ್ನ ಸೇವಕರನ್ನು ಗದರಿಸಿದ ನಂತರ ಇತರರನ್ನುದ್ದೇಶಿಸಿ, 'ಇರಲಿ ಈ ಅಯೋಗ್ಯರಿಗೆ ಇದೇ ಶಿಕ್ಷೆ' ಎಂದು ಹೇಳುವಂತೆಯೇ ಇದೆ ಈ ಕೊನೆಯ ಉಲ್ಲೇಖ.